**<u>ಸಾಕ್ಷಿಯನ್ನು ದಿನಾಂಕ 17.06.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್ ಕೆ ವಕೀಲರಿಂದಃ</u>**

1. ದಾವಾ ಸರ್ವೆ ನಂಬರ್ 47 ರ ಅಕ್ಕ-ಪಕ್ಕದಲ್ಲಿ ಯಾವ ಸರ್ವೆ ನಂಬರ್ ಗಳ ಜಮೀನು ಇದೆ ಎನ್ನುವುದು ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ದಕ್ಷಿಣ ದಿಕ್ಕಿಗೆ ಪ್ರತಿವಾದಿಯರು ತಮ್ಮ ಜಮೀನನ್ನು ಸಾಗುವಳಿ ಮಾಡುತ್ತಾರೆ. ನಮಗೆ ಜಮೀನು ಮಂಜೂರಾಗುವುದಕ್ಕೂ ಎಷ್ಟು ವರ್ಷ ಹಿಂದಿನಿಂದ ಪ್ರತಿವಾದಿಯರು ತಮ್ಮ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.
2. ನಾನು ಮತ್ತು ನನ್ನ ಗಂಡ ಈ ಹಿಂದೆ ಭದ್ರಾವತಿಯಲ್ಲಿ ವಾಸವಿದ್ದೆವು ಎಂದರೆ ಸರಿ. ನಾವು 12 ವರ್ಷ ಭದ್ರಾವತಿಯಲ್ಲಿ ವಾಸವಿದ್ದೆವು. ಆಗ ನಾನು ಗೃಹಿಣಿಯಾಗಿದ್ದೆ. ನನ್ನ ಗಂಡ ಮನೆಯಲ್ಲಿ ಟೀ-ಕಾಫಿ ತಯಾರಿಸಿಕೊಂಡು ಸರ್ಕಾರಿ ಕಛೇರಿ ಮತ್ತು ಇತರರಡೆ ವ್ಯಾಪಾರ ಮಾಡುತ್ತಿದ್ದರು. ಆ ಕಾರಣ ನನ್ನ ಗಂಡನಿಗೆ ತಾಲ್ಲೂಕ್ ಕಛೇರಿಯಲ್ಲಿ ಹಲವು ಅಧಿಕಾರಿಗಳ ಪರಿಚಯ ಮತ್ತು ವಿಶ್ವಾಸ ಇತ್ತು ಎಂದರೆ ಸರಿ. ನನ್ನ ಗಂಡ ಅನಾರೋಗ್ಯಕ್ಕೆ ತುತ್ತಾಗಿದ್ದರಿಂದ ಭದ್ರಾವತಿಗೆ ಬಿಟ್ಟು ಕಲ್ಪನ ಹಳ್ಳಿಗೆ ಹೋದೆವು. ನನ್ನ ಗಂಡನಿಗೆ ಕಲ್ಪನಹಳ್ಳಿಯಲ್ಲಿ ಯಾವುದೇ ಆಸ್ತಿ ಇರಲಿಲ್ಲ. ಪಿತ್ರಾರ್ಜಿತವಾಗಿ ಬಂದ ಯಾವುದೇ ಮನೆ ಇರಲಿಲ್ಲ. ನನ್ನ ಗಂಡ ಮೂಲತಃ ನಲ್ಲೂರು ಗ್ರಾಮದವರು. ನನ್ನ ತಾಯಿ ಮನೆ ಕಲ್ಪನಹಳ್ಳಿ. ನನ್ನ ತವರು ಮನೆಯವರಿಗೆ ಕಲ್ಪನಹಳ್ಳಿ ಗ್ರಾಮದಲ್ಲಿ ಜಮೀನು ಇತ್ತು. ಅವುಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ.
3. ದಾವಾ ಸ್ವತ್ತಿನ ಮಂಜೂರಾತಿಗೆ ನನ್ನ ಗಂಡ ಯಾವಾಗ ಅರ್ಜಿ ಕೊಟ್ಟಿದ್ದರು ಎನ್ನುವುದು

ನನಗೆ ಗೊತ್ತಿಲ್ಲ. 2018 ರಲ್ಲಿ ದಾವಾ ಸ್ವತ್ತು ಮಂಜೂರಾಗಿ ಸಾಗುವಳಿ ಚೀಟಿ ಕೊಟ್ಟಿದ್ದಾರೆ. ಸಾಗುವಳಿ ಚೀಟಿ ಪಡೆದ ತಕ್ಷಣ ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದೇವೆ. ಸಾಗುವಳಿ ಚೀಟಿ ಪಡೆದುಕೊಂಡು ನಾವು ದಾವಾ ಸ್ವತ್ತನ್ನು ಸಾಗುವಳಿ ಮಾಡಲು ಹೋದಾಗ ಪ್ರತಿವಾದಿಯರು ಸದರಿ ಸ್ವತ್ತಿನ ಸ್ವಲ್ಪ ಭಾಗ ತಮಗೆ ಸೇರಿದ್ದು ಎಂದು ತಕರಾರು ಮಾಡಿದ್ದರು ಎನ್ನುವುದು ಸರಿಯಲ್ಲ. ತಮ್ಮ ಸ್ವಾಧೀನದಲ್ಲಿರುವ ಜಮೀನನ್ನು ನಮಗೆ ಮಂಜೂರು ಮಾಡಲಾಗಿದೆ ಎಂಬ ಕಾರಣಕ್ಕೆ ಪ್ರತಿವಾದಿಯರು ಉಪ ವಿಭಾಗಧಿಕಾರಿಗಳ ಮುಂದೆ ನಮಗೆ ಕೊಟ್ಟಿದ್ದ ಸಾಗುವಳಿ ಚೀಟಿಯನ್ನು ಪ್ರಶ್ನೆ ಮಾಡಿದ್ದರು ಎಂದರೆ ಸರಿ.

4. ಪ್ರತಿವಾದಿಯರು ಸಾಗುವಳಿ ಮಾಡುತ್ತಿರುವ ಜಮೀನಿನ ಸಂಬಂಧ ಸರ್ಕಾರದವರು ಅವರಿಗೆ ಇನ್ನು ಹಕ್ಕು ಪತ್ರ ಕೊಟ್ಟಿಲ್ಲ ಎಂದರೆ ಸರಿ. ಸದರಿ ವಿಚಾರವನ್ನು ತಿಳಿದುಕೊಂಡು ನಾವು ಸಾಗುವಳಿ ಚೀಟಿ ಆಧಾರದ ಮೇಲೆ ಪ್ರತಿವಾದಿಯರು ಸ್ವಾಧೀನದಲ್ಲಿರುವ ಜಮೀನನ್ನು ಉಳುಮೆ ಮಾಡಲು ಹೋಗಿದ್ದೆವು ಎನ್ನುವುದು ಸರಿಯಲ್ಲ.

5. ನಿಮ್ಮ ಮತ್ತು ಪ್ರತಿವಾದಿಯರ ನಡುವೆ ಯಾವುದೇ ತಕರಾರು ಇಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ಈ ದಾವೆಯನ್ನು ನನ್ನ ಗಂಡ ಯಾವ ಕಾರಣಕ್ಕೆ ದಾಖಲಿಸಿದ್ದಾರೆ ಎಂಬುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನಗೆ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ ಎಂದರೆ ಸರಿ.

6. ಉಪ ವಿಭಾಗಾಧಿಕಾರಿಗಳ ನ್ಯಾಯಾಲಯವು ನಮ್ಮ ಮತ್ತು ಪ್ರತಿವಾದಿಯರ ಸ್ವಾಧೀನದಲ್ಲಿರುವ ಜಮೀನುಗಳನ್ನು ಅಳತೆ ಮಾಡಿ ಭೂ ಮಂಜೂರಾತಿ ಸಮಿತಿ ಮುಂದೆ ಮಂಡಿಸುವಂತೆ ವರದಿ ಮಾಡುವಂತೆ ಆದೇಶ ಮಾಡಿದೆ ಎಂದರೆ ಸರಿ.

**<u>ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.</u>**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**

**1 ನೇ ಹೆಚ್ಚುವರಿ/ ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**